# ಏಂಜೆಲಿನಾ ಜೋಲಿ ಮದುವೆ

ಏಂಜೆಲಿನಾ ಜೋಲಿ ಹಾಲಿವುಡ್ ಕಂಡ ಮೋಹಕ ನಟಿಯೂ ಹೌದು, ಚೆಲುವೆಯೂ ಹೌದು. ನಟಿಸಿದ್ದು ಮೂವತ್ತೇ ಸಿನಿಮಾ. ಜೊತೆಗೆ ನಿರ್ದೇಶನವನ್ನೂ ಮಾಡಿದಳು. ಎರಡು ಆಸ್ಕರ್ ಪ್ರಶಸ್ತಿ ಮತ್ತು ಮೂರು ಗೋಲ್ಡನ್ ಗ್ಲೋಬ್ ಪ್ರಶಸ್ತಿಗಳು ಆಕೆಯ ಅಭಿನಯ ಪ್ರತಿಭೆಗೆ ಸಾಕ್ಷಿಯಾಗಿವೆ. ಈ ಜೂನ್ 4ರಂದು ಆಕೆಯ 45ನೇ ಹುಟ್ಟುಹಬ್ಬ. ಅದಕ್ಕೂ ಮುನ್ನ ಈಗ ಆಕೆ ಮದುವೆಯಾಗಲು ಹೊರಟಿದ್ದಾಳೆ. ಅಂದಹಾಗೆ ಇದು ಆಕೆಯ ನಾಲ್ಕನೇ ಮದುವೆ. ಮದುವೆಯ ಸುದ್ದಿ ಗಾಳಿಮಾತು ಎಂದಷ್ಟೇ ಹೇಳುವವರೂ ಇದ್ದಾರೆ. ಆದರೆ ಆಕೆ ಮತ್ತೆ ಪ್ರೇಮದಲ್ಲಿ ಬಿದ್ದಿರುವುದಂತೂ ನಿಜ.

ಅಭಿನಯ ಮಾತ್ರವಲ್ಲ, ದುಡಿಮೆಯಲ್ಲೂ ಈಕೆಯದ್ದು ಎತ್ತಿದ ಕೈ. ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ನಟಿ ಎನ್ನುವ ಹೆಗ್ಗಳಿಕೆ ಈಕೆಯದ್ದು. ಚಿತ್ರವೊಂದಕ್ಕೆ 15ರಿಂದ 20 ದಶಲಕ್ಷ ಡಾಲರ್ ಸಂಭಾವನೆ ಪಡೆಯುತ್ತಾಳೆ. 4 ವರ್ಷಗಳ ಕಾಲ ಚಿತ್ರರಂಗದಿಂದ ದೂರವಿದ್ದು ವಿಶ್ರಾಂತಿ ಪಡೆದ ಬಳಿಕ ಆಕೆ ಡಿಸ್ನಿ ಬ್ಯಾನರ್‌ನ 'ಮೇಲ್‌ಫಿಸೆಂಟ್' ಚಿತ್ರದಲ್ಲಿ ನಟಿಸಲು ಸಹಿ ಹಾಕಿದಾಗ ಆಕೆಗೆ ಸಿಕ್ಕಿದ ಸಂಭಾವನೆ 33 ದಶಲಕ್ಷ ಡಾಲರ್! ಈ ಚಿತ್ರ ಬಾಕ್ಸ್‌ಆಫೀಸ್‌ನಲ್ಲಿ ಒಟ್ಟು 758 ದಶಲಕ್ಷ ಡಾಲರ್ ಗಳಿಸಿತು. ಮೊದಲ ವಾರದ ಕಲೆಕ್ಷನ್‌ನಲ್ಲಿ ಜಾಗತಿಕ ದಾಖಲೆಯನ್ನೂ ಮಾಡಿತು. ಅಭಿನಯದಿಂದಲೇ ಆಕೆಯ ನಿವ್ವಳ ಗಳಿಕೆ 160 ದಶಲಕ್ಷ ಡಾಲರ್ ಎನ್ನುತ್ತಿದೆ ಫೋರ್ಬ್ಸ್ ಪಟ್ಟಿ.



1996ರಲ್ಲಿ ಸಹನಟ ಜಾನಿ ಲೀ ಮಿಲ್ಲರ್‌ನನ್ನು ಮದುವೆಯಾದಾಗ ಈಕೆ ಸಂತೋಷದಿಂದಲೇ ಇದ್ದಳು. ಆದರೆ ಮೂರು ವರ್ಷದಲ್ಲಿ ವಿಚ್ಛೇದನ ನಡೆಯಿತು. ನಾಲ್ಕು ವರ್ಷಗಳ ಬಳಿಕ ಬಾಬ್ ಥಾರ್ನ್ಟನ್‌ನನ್ನು ಮದುವೆಯಾದಳು. ಅದೂ ಮೂರೇ ವರ್ಷಕ್ಕೆ ಮುಕ್ತಾಯ ಕಂಡಿತು. ಆ ಬಳಿಕ 14 ವರ್ಷಗಳ ಕಾಲ ಮದುವೆಯ ಸುದ್ದಿ ಎತ್ತಲಿಲ್ಲ ಈಕೆ. ಈ ಮಧ್ಯೆ ನಿಕಟವಾದವರು ಹಲವರಿದ್ದರು. ಆದರೆ 'ಬೈ ದಿ ಸೀ' ಚಿತ್ರದಲ್ಲಿ ಬ್ರಾಡ್‌ಪಿಟ್ ಜೊತೆಗೆ ನಟಿಸಿದ ಬಳಿಕ ಇನ್ನೊಂದು ಪ್ರೇಮ ಪಲ್ಲವಿಸಿತು. ಅದು ಮೂರನೇ ಮದುವೆಗೆ ದಾರಿ ತೋರಿತು.

ಬಹುಶಃ ಬ್ರಾಡ್‌ಪಿಟ್ ಜೊತೆಗಿನ ಮದುವೆಯೇ ಹೆಚ್ಚು ಯಶಸ್ವಿ ಅನ್ನಬೇಕು. ಖ್ಯಾತಿಯಲ್ಲಿ ಜೋಲಿಗಿಂತ ಒಂದು ತೂಕ ಹೆಚ್ಚೇ ಇರುವ ಬ್ರಾಡ್‌ಪಿಟ್ ಬಹುತೇಕ ಸಮಾರಂಭದಲ್ಲಿ ಆಕೆಯ ಜೊತೆಗೇ ಕಾಣಿಸಿಕೊಳ್ಳುತ್ತಿದ್ದ. ಇಬ್ಬರೂ ಸೇರಿ ಮಗವೊಂದನ್ನು ದತ್ತು ಪಡೆದರು. ಆ ಬಳಿಕ ಜೋಲಿಯೇ ಮಗು ಹೆತ್ತಳು. ಮತ್ತೆ ಇನ್ನೊಂದು ಮಗುವನ್ನು ದತ್ತು ಪಡೆದರು. ಅದರ ಬೆನ್ನಲ್ಲಿ ಜೋಲಿ ಅವಳಿ ಮಕ್ಕಳ ತಾಯಿಯಾದಳು. ಅದಾದ ಬಳಿಕವೂ ಇನ್ನೊಂದು ಮಗುವಿನ ದತ್ತು! ಒಟ್ಟಾರೆ ಈ ದಂಪತಿಗೆ ಆರು ಮಕ್ಕಳು. ಮೂರು ಗಂಡು, ಮೂರು ಹೆಣ್ಣು.

ಈ ಮಧ್ಯೆ ಜೋಲಿಯ ಆರೋಗ್ಯ ಕೈಕೊಟ್ಟಿತ್ತು. ಕ್ಯಾನ್ಸರ್ ಹರಡುವ ಭೀತಿ ಖಚಿತವಾದಾಗ ಸ್ತನಛೇದನ ನಡೆಯಿತು. ಇನ್ನಷ್ಟು ದೈಹಿಕ ತೊಂದರೆಯಿಂದ ಬಳಲಿದಳು. ಎಲ್ಲದರ ಮಧ್ಯೆಯೂ ಆಕೆಯ ಸಮಾಜಸೇವೆ ನಿಲ್ಲಲಿಲ್ಲ. ಜಾಗತಿಕ ನಿರಾಶ್ರಿತರ ಬದುಕು ಹಸನು ಮಾಡಲು ಲಕ್ಷಾಂತರ ಡಾಲರ್ ವ್ಯಯಿಸಿದಳು. ವಿಶ್ವಸಂಸ್ಥೆಯ ರಾಯಭಾರಿಯಾಗಿ ಓಡಾಡಿದಳು.

ಅದೇನಾಯಿತೋ ಗೊತ್ತಿಲ್ಲ, ಬ್ರಾಡ್‌ಪಿಟ್ ಜೊತೆಗಿನ ಮದುವೆಯೂ ಮುರಿದುಬಿತ್ತು. ಅತ್ಯಂತ ಯಶಸ್ವಿ ಮದುವೆ ಎಂದುಕೊಂಡದ್ದು ಎರಡೇ ವರ್ಷ ಬಾಳಿಕೆ ಬಂತು. 'ಬೆಸುಗೆ ಏರ್ಪಡಿಸಲು ಸಾಧ್ಯವೇ ಇಲ್ಲದ ಭಿನ್ನಮತವಿದು. ಹಾಗಾಗಿ ವಿಚ್ಛೇದನವೊಂದೇ ದಾರಿ' ಎಂದಳು ಜೋಲಿ. ಇಬ್ಬರೂ ಜೊತೆ ಸೇರಿ ದುಡಿದದ್ದನ್ನು ಮಕ್ಕಳ ನಡುವೆ ಹಂಚಿಕೊಳ್ಳುವ ಕಾನೂನು ಪ್ರಕ್ರಿಯೆಗಳು ಇತ್ತೀಚೆಗೆ ಮುಗಿದಿವೆ. ಆ ಬಳಿಕ ಜೋಲಿ ನಾಲ್ಕನೇ ಮದುವೆಯ ಸುದ್ದಿ ಹಬ್ಬಿದೆ.

ನಟಿಯಾಗಿ ಮಾತ್ರವಲ್ಲ, ನಿರ್ದೇಶಕಿಯಾಗಿಯೂ ಜೋಲಿ ತನ್ನ ಪ್ರತಿಭೆಯನ್ನು ಸಾಬೀತುಪಡಿಸಿದ್ದಾಳೆ. 'ಬೈ ದಿ ಸೀ' ಆಕೆಯದ್ದೇ ಕಥೆ, ನಟನೆ ಮತ್ತು ನಿರ್ದೇಶನ. ಆ ಬಳಿಕ ಎರಡನೇ ಮಹಾಯುದ್ಧದ ಕಥೆಯ ಹಿನ್ನೆಲೆಯುಳ್ಳ 'ಅನ್‌ಬ್ರೋಕನ್' ನಿರ್ದೇಶಿಸಿದಳು. ಈ ಚಿತ್ರ ಬಾಕ್ಸ್‌ಆಫೀಸ್‌ನಲ್ಲಿ ದಾಖಲೆ ಕಲೆಕ್ಷನ್ ಮಾಡಿತು. ಫ್ಯಾಷನ್ ಪ್ರಿಯರಿಗೂ ಈಕೆ ಅಚ್ಚುಮೆಚ್ಚು. ಕಳೆದ ವಾರ ಭಾರತೀಯ ಸೀರೆಯಲ್ಲಿ ಈಕೆಯ ಫೋಟೊಗಳನ್ನು ನೋಡಿದವರು ಫಿದಾ ಆಗಿರುವುದು ಸುಳ್ಳಲ್ಲ. ಸೈಂಟ್ ಜಾನ್ ಕ್ಲಾಥಿಂಗ್ ಈಕೆಯದ್ದೇ ಕಂಪನಿ. ಜಗತ್ತಿನ ಅತ್ಯಂತ ಪ್ರಭಾವಶಾಲಿ ಮಹಿಳೆಯರ ಪಟ್ಟಿಯಲ್ಲಿ ಪ್ರತಿವರ್ಷವೂ ಈಕೆಯ ಹೆಸರು ಕಾಣಿಸುತ್ತಿದೆ. ಮೂರು ವಿಫಲ ಮದುವೆಗಳ ಬಳಿಕ ನಾಲ್ಕನೆಯದ್ದು ಈಕೆಗೆ ನೆಮ್ಮದಿ ನೀಡಬಹುದೇ? ಗೊತ್ತಿಲ್ಲ. ಸೃಜನಶೀಲ ಮನಸ್ಸು ಒಂದೆಡೆ ನೆಲೆನಿಲ್ಲುವುದು ಕಷ್ಟ. ಅದರಲ್ಲೂ ಆಕೆ ಮಹಿಳೆಯಾಗಿದ್ದರೆ, ಗಟ್ಟಿಯಾದ ಸ್ವಂತ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದರೆ ಇನ್ನೂ ಕಷ್ಟ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65